ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/70/ ಸುತ್ತೋಲೆ /2022-23/ವಿವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು. ದಿನಾಂಕ:06.01.2023.

## ಸುತ್ತೋಲೆ

ವಿಷಯ: ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಪೋರ್ಟಲ್ ಮೂಲಕ ಹೆಣ್ಣುಮಕ್ಕಳ ಪೂರ್ಣ ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ:21.01.2023.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2022-23 ನೇ ಸಾಲಿಗೆ ಸರ್ಕಾರಿ ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರ ಹೆಣ್ಣು ಮಕ್ಕಳ ಪೂರ್ಣ ಶುಲ್ಕ ಮರುಪಾವತಿಗಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿರುವ ಹೆಣ್ಣು ಮಕ್ಕಳ ಎಸ್ಎಸ್ ಪಿ ಐಡಿ ಒಳಗೊಂಡಂತೆ ಮಾಹಿತಿಯನ್ನು ನೀಡಲು ಸೂಚಿಸಲಾಗಿತ್ತು. ಅದರಂತೆ ಕಾಲೇಜಿನ ಪ್ರಾಂಶುಪಾಲರು ಹೆಣ್ಣು ಮಕ್ಕಳ ಎಸ್.ಎಸ್.ಪಿ ಐಡಿ ಒಳಗೊಂಡಂತೆ (2021-22ಸಾಲಿನ) ಮಾಹಿತಿಯನ್ನು ಸಲ್ಲಿಸಲಾಗಿದ್ದು, ಇದರಲ್ಲಿ ಶೇ.50% ವಿದ್ಯಾರ್ಥಿನಿಯರು 2022-23 ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಪೋರ್ಟಲ್ ಮೂಲಕ ಹೆಣ್ಣು ಮಕ್ಕಳ ಪೂರ್ಣ ಶುಲ್ಕ ಮರುಪಾವತಿಗಾಗಿ ಅರ್ಜಿ ಸಲ್ಲಿಸದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ತಿಳಿಸುವುದೇನೆಂದರೆ ಮಾಹಿತಿ ನೀಡಿರುವ ವಿದ್ಯಾರ್ಥಿನಿಯರಿಗೆ 2022-23ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ ಪೋರ್ಟಲ್ (https://ssp.postmetric.karnataka.gov.in/2223) ಮೂಲಕ ಅರ್ಜಿ ಸಲ್ಲಿಸಲು ತಿಳಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

<u>ವಿಶೇಷ ಸೂಚನೆ</u>:-2022-23 ನೇ ಸಾಲಿನಿಂದ ಎಲ್ಲಾ ವಿದ್ಯಾರ್ಥಿವೇತನ ಯೋಜನೆಗಳು **(ಸಂಚಿಹೊನ್ನಮ್ಮ, ಸಿ.ವಿ.ರಾಮನ್ , ಹೆಚ್ಐವಿ/ಲೆಪ್ರಸಿ ಪೀಡಿತ ಮಕ್ಕಳ/ಪೋಷಕರ ಮಕ್ಕಳ ಮತ್ತು ಸೈನಿಕ ಸಿಬ್ಬಂಧಿ ಮಕ್ಕಳ ವಿದ್ಯಾರ್ಥಿವೇತನ ಮತ್ತು ಹೆಣ್ಣು ಮಕ್ಕಳ ಪೂರ್ಣ ಶುಲ್ಕ, ಕಿತ್ತೂರು ರಾಣಿ ಚೆನ್ನಮ್ಮ ಪುರಸ್ಕಾರ ಹಾಗೂ ಎಂ.ಬಿ.ಎ./ಎಂ.ಸಿ.ಎ ಎಸ್ಸಿ/ಎಸ್ಟಿ ಮತ್ತು ಪದವಿ ಎಸ್ಸಿ/ಎಸ್ಟಿ ಮಕ್ಕಳ ಬೋಧನಾ ಶುಲ್ಕಮರುಪಾವತಿ) ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅನುಷ್ಠಾನಗೊಂಡಿರುವುದರಿಂದ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಎಸ್.ಎಸ್.ಪಿ ಪೋರ್ಟಲ್ ಮೂಲಕ, ಎಲ್ಲಾ ವಿದ್ಯಾರ್ಥಿವೇತನಕ್ಕೂ ಒಂದೇ ಅರ್ಜಿ ಸಲ್ಲಿಸುವಂತೆ ಎಲ್ಲಾ ಪ್ರಾಂಶುಪಾಲರು ಕ್ರಮವಹಿಸುವುದು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗುವ ತೊಂದರೆಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.**

ಕಾಲೇಜು ಶಿಕ್ಷಣ ನಿರ್ದೇಶಕರು.

<u>ಇವರಿಗೆ,</u>

1.ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ. ಶಿವಮೊಗ್ಗ,ಕಲಬುರಗಿ.
2. ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ,
3. ಮಾಹಿತಿ ಅಧಿಕಾರಿಗಳು ಮಾಹಿತಿ ತಂತ್ರಾಜ್ಞಾನ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು,